**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಸಿ.ಸಿ.ನಂಬರ್ : 158/2018

ಪಿ.ಡಬ್ಲ್ಯೂ : 3 ಸಿ.ಡಬ್ಲ್ಯೂ 2

| | |
|---|---|
| ಸಾಕ್ಷಿದಾರರ ಹೆಸರು | : ರೇವಣಸಿದ್ದಪ್ಪ ಅತಾಪಿ |
| ತಂದೆಯ ಹೆಸರು | : ಕಾಂತಪ್ಪ |
| ವಯಸ್ಸು | : 39 ವರ್ಷ |
| ಉದ್ಯೋಗ | : ಅಬಕಾರಿ ಉಪ ನಿರೀಕ್ಷಕರು ಚಿಕ್ಕಬಳ್ಳಾಪೂರ |
| ವಾಸಸ್ಥಳ | : ಚಿಕ್ಕಬಳ್ಳಾಪೂರ |
| ಸಮಯ | : 12.45 |

ಸಾಕ್ಷಿಗೆ ಇಂದು ದಿನಾಂಕಃ 24-07-2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ**

ಸಿಂದಗಿ ಅಬಕಾರಿ ಕಛೇರಿಯಲ್ಲಿ ನಾನು 2014 ರಿಂದ 2025 ರವರೆಗೆ ನಾನು ಅಬಕಾರಿ ರಕ್ಷಕ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 25-02-2017 ರಂದು ಬೆಳಿಗ್ಗೆ 6 ಗಂಟೆ ಸುಮಾರಿಗೆ ಕಛೇರಿಯಲ್ಲಿದ್ದಾಗ ನನ್ನನ್ನು ಚಾ ಸಾ 3 ಮತ್ತು 4 ರವರನ್ನು ಕರ್ತವ್ಯದ ಮೇಲೆ ಚಾ ಸಾ 1 ರವರು ರಸ್ತೆ ಗಾವಲು ಮಾಡಲು ಕರೆದುಕೊಂಡು ಹೋಗಿದ್ದು ನಮ್ಮ ಕಛೇರಿ ವಾಹನ ನಂಬರ ಕೆಎ/28/ಜಿ/313 ರಲ್ಲಿ ಚಾಂದಕವಟೆ ಮಾರ್ಗವಾಗಿ ಚಿಕ್ಕರೂಗಿ ತಾಂಬಾ ರಸ್ತೆ ಮಾರ್ಗವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೆಳಿಗ್ಗೆ 9 ಗಂಟೆಗೆ ಸುಮಾರಿಗೆ ಚಿಕ್ಕರೂಗಿ ಮಾರ್ಗವಾಗಿ ದ್ವಿ ಚಕ್ರ ವಾಹನದ ಸವಾರನು ಅನುಮಾನಸ್ಪದವಾಗಿ ಬರುತ್ತಿರುವುದು ಕಂಡು ಬಂದಿದ್ದು, ತಡೆದು ನಿಲ್ಲಿಸಿ ನೊಡಲಾಗಿ ವಾಹನದ ಮೇಲೆ ಸ್ಟಾರ ಪಾನ ಶಾನ ಮಸಾಲ ಎಂದು ಬರೆದ ಒಂದು ಕೈ ಚೇಲ ಇದ್ದು ಅದರಲ್ಲಿ ಏನು ಇರುತ್ತದೆ ಎಂದು ವಿಚಾರಿಸಲಾಗಿ ಆತ ಏನು ಇಲ್ಲ ಎಂದು ಭಯಗೊಂಡನು.

ಸ್ಥಳದಲ್ಲಿ ಯಾರು ಇಲ್ಲದ ಕಾರಣ ನನ್ನನ್ನು ಹಾಗೂ ಚಾ ಸಾ 3 ರವರನ್ನು ಪಂಚರಾಗಿ ನೇಮಕ ಮಾಡಿಕೊಂಡು ಸ್ಥಳದಲ್ಲಿ ಚಾ ಸಾ 1 ರವರು ಶೋಧನಾ ಪತ್ರವನ್ನು ತಯಾರಿಸಿ ನಂತರ ಚೀಲದಲ್ಲಿ ಓ ಸಿ ಎಂದು ಮುದ್ರಿತವಾದ ರಟ್ಟಿನ ಬಾಕ್ಸ ಇದ್ದು ಪರಿಶೀಲನೆ ಮಾಡಲಾಗಿ ಅದರಲ್ಲಿ 90 ಎಮ್ ಎಲ್ 30 ಓ ಸಿ ಟೆಟ್ರಾ ಪಾಕೆಟುಗಳು 180 ಎಮ್ ಎಲ್ 12 ಮ್ಯಾಕಡೊಲ್ಸ ಗಾಜಿನ ಬಾಟಲಿಗಳು. ಸದರಿ ವ್ಯಕ್ತಿಯನ್ನು ಮದ್ಯ ಸಾಗಾಣಿಕೆ ಮಾಡಲು ಪರವಾನಿಗೆ ಇದ್ದ ಬಗ್ಗೆ ವಿಚಾರಿಸಲಾಗಿ ಆತ ಇರುವುದಿಲ್ಲ ಎಂದು ನುಡಿದಿದ್ದು, ಆತ ಬಂದಂತಹ ದ್ವಿ ಚಕ್ರ ವಾಹನವನ್ನು ಗಮನಿಸಲಾಗಿ ಅದು ಟಿ ವಿ ಎಸ್ ನಂಬರ ಕೆಎ 29/ ವಿ/3553 ಅಂತಾ ಇದ್ದು, ಆತನ ಹೆಸರು ಕೇಳಲಾಗಿ ಚಂದ್ರಾಮಪ್ಪ ಪುಜಾರಿ ಎಂದು ತಿಳಿಸಿದ್ದು, ಓ ಸಿ ಟೆಟ್ರಾ ಪಾಕೆಟುಗಳಿಂದ 26 ಟೆಟ್ರಾ ಪಾಕೆಟುಗಳನ್ನು ಹಾಗೂ 12 ಮ್ಯಾಕಡೊನಾಲ್ಡ 12 ಗಾಜಿನ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದಿದ್ದು ಅವುಗಳನ್ನು ಇಲಾಖೆ ಶೀಲ್ ಹಾಕಿ ಪಂಚರಾದ ನನ್ನ ಹಾಗೂ ಚಾ ಸಾ 3 ರವರ ಸಹಿ ಪಡೆದು ಪಂಚನಾಮೆ ಬೆಳಿಗ್ಗೆ 9 ರಿಂದ 10 ಗಂಟೆವರೆಗೆ ಮಾಡಿ ಸಹಿ ಪಡೆದಿರುತ್ತಾರೆ. ಸಾಕ್ಷಿಗೆ ನಿಪಿ 2 ನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿ ನಿಪಿ 2 ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು ಮಾ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿ ಮು ಮಾ 1 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ನೋಡಿ ಗುರುತಿಸಿರುತ್ತಾರೆ. ಚಾ ಸಾ 1 ರವರು ಜಪ್ತಿ ಮಾಡಿಕೊಂಡ ದ್ವಿ ಚಕ್ರ ವಾಹನ ನೋಡಿ ಗುರುತಿಸುತ್ತೇನೆ. ಸಾಕ್ಷಿಗೆ ಅದಕ್ಕೆ ಸಂಬಂಧಿಸಿದಂತೆ ಭಾವ ಚಿತ್ರವನ್ನು ಹಾಜರು ಮಾಡದ ಕಾರಣ ತೋರಿಸಲು ಆಗಿರುವುದಿಲ್ಲ.

**ಪಾಟೀ ಸವಾಲು  ಆರೋಪಿ ಪರ ಶ್ರೀ ಆರ್ ಆಯ್ ಎಮ್ ವಕೀಲರಿಂದ**

ಸಾಕ್ಷಿಗೆ ಚಾ ಸಾ 1 ರವರೊಂದದಿಗೆ ರಸ್ತೆ ಗಾವಲಿಗೆ ಚಾಂದಕವಟೆ ಮಾರ್ಗವಾಗಿ ರಾಂಪೂರ, ಗಣಿಹಾರ ಮಾರ್ಗವಾಗಿ ಹೋಗಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ.  ಸದರಿ ರಸ್ತೆಗಳು ಮುಖ್ಯ ರಸ್ತೆಗಳಾಗಿದ್ದು ಸಾಕಷ್ಟು ಜನದಟ್ಟಣೆ ಇರುತ್ತದೆ ಎಂದರೆ ಸಾಕ್ಷಿ ಅಷ್ಟಾಗಿ ಇರುವುದಿಲ್ಲ ಸಾಮಾನ್ಯವಾಗಿ ಜನರ ಓಡಾಟ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ರಸ್ತೆಯ ಎರಡು ಬದಿಯಲ್ಲಿ ಜಮೀನುಗಳು ಇವೆ ಎಂದರೆ ಸರಿ. ಸಾಕ್ಷಿಗೆ ಹಾಗಿದ್ದಲ್ಲಿ ಸದರಿ ಹೊಲಗಳಲ್ಲ ಜನರು ಕಂಡು ಬಂದಿರಬೇಕೆಂದರೆ ಸಾಕ್ಷಿ ನಾವು ಕರ್ತವ್ಯದ ಮೇಲೆ ಇದ್ದಾಗ ಫೆಬ್ರವರಿ ತಿಂಗಳು ಇದ್ದು ಬೇಸಿಗೆ ಕೆಲಸ ಅಷ್ಟಾಗಿ ಇರುವುದಿಲ್ಲ ಎಂದು ನುಡಿದಿರುತ್ತಾರೆ.

ಫೆಬ್ರವರಿ ತಿಂಗಳಲ್ಲಿ ಜೋಳದ ರಾಶಿ ಮಾಡುತ್ತಿದ್ದು ಹೊಲದ ಕೆಲಸ ನಡೆಯುತ್ತಿದ್ದು ಜನರು ಇರುತ್ತಾರೆ ಎಂದರೆ ಸಾಕ್ಷಿ ನಾವು ಕರ್ತವ್ಯದಲ್ಲಿದ್ದಾಗ ಜನರು ಇದ್ದಿರಲಿಲ್ಲ ಎಂದು ನುಡಿದಿರುತ್ತಾರೆ.  ಇಲಾಖಾ ವಾಹನದಲ್ಲಿ ಎಷ್ಟು ಜನ ಹೋಗಿದ್ದೀರಿ ಎಂದರೆ ಸಾಕ್ಷಿ 4 ಜನ ಎಂದು ನುಡಿದಿರುತ್ತಾರೆ.  ಸಾಕ್ಷಿಗೆ ತಾವು ಎಲ್ಲಿ ರಸ್ತೆ ಗಾವಲು ಇದ್ದೀರಿ ಎಂದರೆ ಸಾಕ್ಷಿ ಚಿಕ್ಕರೂಗಿ ಮಾರ್ಗವಾಗಿ ಇದ್ದೆವು ಎಂದು ನುಡಿದಿರುತ್ತಾರೆ. ಅಂದಾಜು ಎಷ್ಟು ಕಿ ಮೀ ಅಂತರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆವು ಎಂದು ಗೊತ್ತಿಲ್ಲ.

ಸಾಕ್ಷಿಗೆ ರಸ್ತೆ ಮೇಲೆ ಹಾಕಿದ ಮೈಲುಗಲ್ಲುಗಳನ್ನು ಗಮನಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ಮು ಮಾ ಜಪ್ತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಆರೋಪಿ ಮದ್ಯವನ್ನು ತರುತ್ತಿದ್ದ ಎನ್ನಲಾದ ಸ್ಟಾರ್ಟ ಜಪ್ತಿ

ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಪಂನಚಾಮೆ ಕಾಲಕ್ಕೆ ಪೋಟೊ ತೆಗೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಿಪಿ 2 ರ ಕಾಲಕ್ಕೆ ಸ್ಥಳದಲ್ಲಿದ್ದಂತಹ ಹೊಲಗಳ ಉತಾರೆಗಳನ್ನು ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿ ತನಿಖಾಧಿಕಾರಿ ಮಾಡುತ್ತಾರೆ. ಆರೋಪಿಗೂ ಹಾಗೂ ಜಪ್ತಿ ಮಾಡಿಕೊಂಡ ಮು ಮಾ ಯಾವುದೇ ಸಂಬಂಧ ಇರುವುದಿಲ್ಲ, ಚಾ ಸಾ 1 ರವರು ಸುಳ್ಳು ದೂರುನ್ನು ದಾಖಲಿಸಿದ್ದು ಅದಕ್ಕೆ ಪೂರಕವಾಗಿ ಪಂಚನಾಮೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.